# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1035 |
| ಸದಸ್ಯರ ಹೆಸರು | ಶ್ರೀ ಟಿ.ಎನ್.ಜವರಾಯಿಗೌಡ |
| ಉತ್ತರಿಸುವ ದಿನಾಂಕ | 18.12.2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಮತ್ತು ಹೊರ ರಾಜ್ಯಗಳಲ್ಲಿ ಮುಜರಾಯಿ ಇಲಾಖೆಗೆ ಸೇರಿದ ಎಷ್ಟು ವಸತಿ ಗೃಹಗಳು ಮತ್ತು ಛತ್ರಗಳಿವೆ. ಯಾವ ಯಾವ ಸ್ಥಳಗಳಲ್ಲಿ ಎಷ್ಟೆಷ್ಟು ಕೊಠಡಿಗಳಿವೆ ಹಾಗೂ ಈ ಕೊಠಡಿಗಳಿಗೆ, ಛತ್ರಗಳಿಗೆ ನಿಗಧಿ ಮಾಡಿರುವ ಮೊತ್ತವೆಷ್ಟು; ಈ ಬಗ್ಗೆ ಆದೇಶ/ಅಧಿಸೂಚಿತ ಪ್ರತಿಯ ವಿವರ ನೀಡುವುದು.</td><td>
<ul>
<li>ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ವಸತಿ ಗೃಹಗಳ ವಿವರವನ್ನು ಅನುಬಂಧ-1 ರಲ್ಲಿ ಒದಗಿಸಿದೆ.</li>
<li>ಹೊರ ರಾಜ್ಯಗಳಲ್ಲಿರುವ ಈ ಕೆಳಕಂಡ ಶ್ರೀಕ್ಷೇತ್ರಗಳಲ್ಲಿ ಕರ್ನಾಟಕ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಯು ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಛತ್ರ/ಕರ್ನಾಟಕ ಭವನಗಳಿರುತ್ತವೆ.</li>
</ul>
<table>
<tr><th>ಕ್ರ. ಸಂ.</th><th>ರಾಜ್ಯ</th><th>ಕ್ಷೇತ್ರ</th></tr>
<tr><td rowspan="4">(1)</td><td rowspan="4">ಆಂಧ್ರಪ್ರದೇಶ</td><td>ತಿರುಮಲ</td></tr>
<tr><td>ತಿರುಚಾನೂರು</td></tr>
<tr><td>ಮಂತ್ರಾಲಯ</td></tr>
<tr><td>ಶ್ರೀಶೈಲಂ</td></tr>
<tr><td rowspan="2">(2)</td><td rowspan="2">ಮಹಾರಾಷ್ಟ್ರ</td><td>ತುಳಜಾಪುರ</td></tr>
<tr><td>ಗುಡ್ಡಾಪುರ</td></tr>
<tr><td>(3)</td><td>ಉತ್ತರಪ್ರದೇಶ</td><td>ವಾರಣಾಸಿ</td></tr>
</table>
<ul>
<li><u>ತಿರುಮಲ</u>:<br>ತಿರುಮಲದ ಕರ್ನಾಟಕ ರಾಜ್ಯ ಛತ್ರದ ಸ್ಥಳದಲ್ಲಿ ಕರ್ನಾಟಕ ರಾಜ್ಯ ಛತ್ರದ ಸಮಗ್ರ ಅಭಿವೃದ್ಧಿ ಯೋಜನೆಯಡಿ ರೂ.200.00ಕೋಟಿ ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲಾಗುತ್ತಿದ್ದು, ಕಾಮಗಾರಿಗಳ ವಿವರ ಕೆಳಕಂಡಂತಿದೆ.</li>
</ul>
ಹಳೇಬೀಡು ಬ್ಲಾಕ್: 82 ಕೊಠಡಿಗಳ ನವೀಕರಣ ಕಾಮಗಾರಿಯು ಮುಕ್ತಾಯವಾಗಿದ್ದು, ಭಕ್ತಾದಿಗಳಿಗೆ ವಸತಿ ಸೌಲಭ್ಯಕ್ಕಾಗಿ ಹಂಚಿಕೆಯಾಗುತ್ತಿರುತ್ತದೆ. (ಕರ್ನಾಟಕ ಪ್ರವಾಸಿ ಸೌಧ ಕಟ್ಟಡ ನವೀಕರಣ)
ಹಂಪಿ ಬ್ಲಾಕ್: 110 AC ಕೊಠಡಿಗಳ ಕಾಮಗಾರಿಯು ಮುಕ್ತಾಯಗೊಂಡಿದ್ದು, ಭಕ್ತಾದಿಗಳ ವಸತಿ ಸೌಲಭ್ಯಕ್ಕಾಗಿ ಹಂಚಿಕೆಯಾಗುತ್ತಿದೆ.
ಐಹೊಳೆ ಬ್ಲಾಕ್: 132 Non-AC ಕೊಠಡಿಗಳ ಕಾಮಗಾರಿ ಮುಕ್ತಾಯ ಹಂತದಲ್ಲಿರುತ್ತದೆ.
ಶ್ರೀ ಕೃಷ್ಣದೇವರಾಯ ಬ್ಲಾಕ್: 36 VVIP AC ಕೊಠಡಗಳ_ ಕಾಮಗಾರಿಯು ಮುಕ್ತಾಯದ ಹಂತದಲ್ಲಿರುತ್ತದೆ.
<u>ಶ್ರೀ ಕೃಷ್ಣ ರಾಜೇಂದ್ರ ಕಲ್ಯಾಣ ಮಂಟಪ</u>:500 ಆಸನಗಳು
</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಹಾಗೂ 8 ಕೊಠಡಿಗಳು ಒಳಗೊಂಡಿದ್ದು, ಕಾಮಗಾರಿ ಮುಕ್ತಾಯ ಹಂತದಲ್ಲಿರುತ್ತದೆ.<br>• **<u>ತಿರುಚಾನೂರು</u>-**<br>19 ಕೊಠಗಳು ಹಾಗೂ 02 ಕಲ್ಯಾಣ ಮಂಟಪಗಳಿರುವ ಮೈಸೂರು ಮಹಾರಾಜ ಕಲ್ಯಾಣ ಮಂಟಪವಿರುತ್ತದೆ.<br>• **<u>ಮಂತ್ರಾಲಯ</u>**:<br>ಕರ್ನಾಟಕ ರಾಜ್ಯ ಛತ್ರದಲ್ಲಿ 02 ಕಟ್ಟಡಗಳಿದ್ದು, ಹಳೆಯ ಕಟ್ಟಡದಲ್ಲಿ 52 ಕೊಠಡಿಗಳು ಮತ್ತು 01 ಕಲ್ಯಾಣ ಮಂಟಪವಿರುತ್ತದೆ. ಹೊಸ ಕಟ್ಟಡದಲ್ಲಿ 50 ಕೊಠಡಿಗಳಿರುತ್ತವೆ.<br>• **<u>ಶ್ರೀಶೈಲಂ</u>**:<br>ಶ್ರೀಶೈಲಂನ ಕರ್ನಾಟಕ ರಾಜ್ಯ ಛತ್ರದಲ್ಲಿ 16 ಕೊಠಡಿಗಳನ್ನೊಳಗೊಂಡಂತೆ ಒಂದು ಕಟ್ಟಡ ಮತ್ತು 8 ಕೊಠಡಿಗಳನ್ನೊಳಗೊಂಡಂತೆ ಒಂದು ಕಟ್ಟಡ ಇರುತ್ತದೆ.<br>ಕರ್ನಾಟಕ ರಾಜ್ಯ ಛತ್ರವು ಶಿಥಿಲಾವಸ್ಥೆ ಯಲ್ಲಿರುವುದನ್ನು ಗಮನಿಸಿ, ಶ್ರೀಶೈಲಂನಲ್ಲಿ ರೂ.85.00 ಕೋಟಿಗಳ ವೆಚ್ಚದಲ್ಲಿ **ನೂತನ ವಸತಿ ಸಂಕೀರ್ಣವನ್ನು** ನಿರ್ಮಿಸಲು 2022-23ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಘೋಷಿಸಿದ್ದು ಈ ಉದ್ದೇಶಕ್ಕಾಗಿ ಪ್ರಥಮ ಹಂತದಲ್ಲಿ ರೂ.45-00 ಕೋಟಿಗಳನ್ನು ಮಂಜೂರು ಮಾಡಿದ್ದು ಈವರೆವಿಗೆ ರೂ.33-75 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದ್ದು, ಸದರಿ ಅನುದಾನವನ್ನು ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರಿಗೆ ಬಿಡುಗಡೆಗೊಳಿಸಲಾಗಿರುತ್ತದೆ.<br>ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಲೋ.ಇ 125 ಬಿಎಂಎಸ್ 2022 ದಿ:25.08.2022ರಲ್ಲಿ ಲೋಕೋಪಯೋಗಿ ಇಲಾಖಾ ವತಿಯಿಂದ ಆಂಧ್ರಪ್ರದೇಶದ ಶ್ರೀಶೈಲಂನಲ್ಲಿ ಯಾತ್ರಿ ನಿವಾಸ ಕಟ್ಟಡ ನಿರ್ಮಾಣ ಕಾಮಗಾರಿಯ ರೂ.85.00 ಕೋಟಿಗಳ ವಿವರವಾದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.<br>ಶ್ರೀಶೈಲಂನ ಶ್ರೀ ಭ್ರಮರಾಂಭ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದಿಂದ ಗುತ್ತಿಗೆ ಪಡೆದಿರುವ ಸದರಿ ಜಾಗದ ಗುತ್ತಿಗೆ ಅವಧಿಯನ್ನು 1997 ರಿಂದ ಆಂಧ್ರಪ್ರದೇಶ ಸರ್ಕಾರವು ನವೀಕರಿಸಿರುವುದಿಲ್ಲ. ಸದರಿ ಜಾಗದ ಗುತ್ತಿಗೆ ಅವಧಿಯನ್ನು ನವೀಕರಿಸುವ ಮತ್ತು ಕಾಮಗಾರಿಯನ್ನು ಕೈಗೊಳ್ಳುವ ಸಲುವಾಗಿ ಲೋಕೋಪಯೋಗಿ ಇಲಾಖೆಗೆ ಸ್ಥಳವನ್ನು ಹಸ್ತಾಂತರಿಸುವ ಕುರಿತು ಧಾರ್ಮಿಕ ದತ್ತಿ ಸಚಿವರು ದಿನಾಂಕ:27.12.2023ರಂದು ಸ್ಥಳಕ್ಕೆ ಭೇಟಿ ನೀಡಿ ಸಂಬಂಧಿಸಿದ ದೇವಾಲಯದ ಅಧಿಕಾರಿಗಳೊಂದಿಗೆ ಚರ್ಚಿಸಿರುತ್ತಾರೆ. ನಂತರ ಇದೇ ವಿಚಾರವಾಗಿ ದಿನಾಂಕ:17.11.2024ರಂದು ಧಾರ್ಮಿಕ ದತ್ತಿ ಆಯುಕ್ತರು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿರುತ್ತಾರೆ.<br>• **<u>ವಾರಣಾಸಿ</u>**: |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | | 1928ರಲ್ಲಿ ಅಂದಿನ ಮೈಸೂರು ಮಹಾರಾಜರ ಕಾಲದಲ್ಲಿ 09 ಕೊಠಡಿಗಳನ್ನೊಳಗೊಂಡ ಕಟ್ಟಡ ಹಾಗೂ ತದನಂತರದಲ್ಲಿ, ಧಾರ್ಮಿಕ ದತ್ತಿ ಇಲಾಖೆಯಿಂದ 2002ನೇ ಸಾಲಿನಲ್ಲಿ 09 ಕೊಠಡಿಗಳನ್ನೊಳಗೊಂಡ ಮತ್ತೊಂದು ಕಟ್ಟಡವನ್ನು ನಿರ್ಮಿಸಲಾಗಿದೆ.<br><br>2024-25ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-410ರಲ್ಲಿನ ಘೋಷಣೆಯಂತೆ, 2024-25ನೇ ಪ್ರಸಕ್ತ ಸಾಲಿನಲ್ಲಿ ವಾರಣಾಸಿಯಲ್ಲಿ ರೂ.5-00 ಕೋಟಿಗಳ ವೆಚ್ಚದಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಯೋಜನೆಯನ್ನು ಅನುಷ್ಠಾನಗೊಳಿಸಲು ತಾತ್ವಿಕ ಅನುಮೋದನೆ ನೀಡಲಾಗಿರುತ್ತದೆ. ಈ ಸಂಬಂಧ ದಿನಾಂಕ:16.08.2024 ರಂದು ಧಾರ್ಮಿಕ ದತ್ತಿ ಸಚಿವರು ಛತ್ರಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ, ಕೈಗೊಳ್ಳಬೇಕಾದ ಅಭಿವೃದ್ಧಿ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ನಿಯಮಾನುಸಾರ ಕ್ರಮವಹಿಸಲು ಸೂಚಿಸಿರುತ್ತಾರೆ.<br><br>ಈತನ್ಮಧ್ಯೆ, ದಿನಾಂಕ:21.09.2024ರಂದು ಛತ್ರದ ಹಳೆಯ ಕಟ್ಟಡದ ಒಂದು ಭಾಗ ಹಾಗೂ ಕಾಂಪೌಂಡ್ ಕುಸಿದಿದ್ದು, ಹೊಸ ಕಟ್ಟಡ ಭಾಗದ ಅಡಿ ಭಾಗದಲ್ಲಿ ಮಣ್ಣು ಸವಕಳಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ದಿನದಿಂದಲೇ ಯಾತ್ರಾರ್ಥಿಗಳಿಗೆ ಕೊಠಡಿಗಳನ್ನು ಹಂಚಿಕೆ ಮಾಡಲಾಗುತ್ತಿರುವುದಿಲ್ಲ. ಈ ಕುರಿತು ದಿನಾಂಕ:29.10.2024ರಂದು ಧಾರ್ಮಿಕ ದತ್ತಿ ಸಚಿವರು ನಡೆಸಿದ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವಂತೆ ಮತ್ತು ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರು ಕರ್ನಾಟಕ ಸರ್ಕಾರದ ಮುಖ್ಯ ವಾಸ್ತು ಶಿಲ್ಪಿಯವರೊಂದಿಗೆ ದಿನಾಂಕ:30.11.2024 ರಂದು ಕರ್ನಾಟಕ ರಾಜ್ಯ ಛತ್ರಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ, ಸಂಪೂರ್ಣ ಹಳೆಯ ಕಟ್ಟಡಗಳನ್ನು ಕೆಡವಿ ಹಾಕಿ ಹೊಸದಾಗಿ ಕಟ್ಟಡ ನಿರ್ಮಿಸುವ ಸಂಬಂಧ ಸಂಪೂರ್ಣ ನಕ್ಷೆ ತಯಾರಿಸಿ ನೀಡುವಂತೆ ಮುಖ್ಯ ವಾಸ್ತು ಶಿಲ್ಪಿಯವರಿಗೆ ಮತ್ತು ನಕ್ಷೆಗೆ ಮಂಜೂರಾತಿ ಪಡೆದು, ಹಂತ ಹಂತವಾಗಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಅನುವಾಗುವಂತೆ ಅಂದಾಜು ಪಟ್ಟಿ ಸಿದ್ಧಪಡಿಸಿ ಸಲ್ಲಿಸುವಂತೆ ನಿರ್ದೇಶನ ನೀಡಲಾಗಿರುತ್ತದೆ.<br><br>• **<u>ತುಳಜಾಪುರ</u>**:<br>04 ಡಾರ್ಮಿಟರಿ, 02 ಕೊಠಡಿಗಳು, 06 ಶೌಚಾಲಯ, 06 ಸ್ನಾನಗೃಹಗಳನ್ನೊಳಗೊಂಡ ಕರ್ನಾಟಕ ರಾಜ್ಯ ಛತ್ರದ ಕಟ್ಟಡವಿರುತ್ತದೆ.<br>• **<u>ಗುಡ್ಡಾಪುರ</u>**:.<br><br>ಕರ್ನಾಟಕ ರಾಜ್ಯ ಛತ್ರದ ಕಟ್ಟಡವು ದಿನಾಂಕ:01.08.2024 ರಂದು ಉದ್ಘಾಟನೆಗೊಂಡಿದ್ದು, ಅನ್ನದಾಸೋಹ ಭವನ ಮತ್ತು ಶೌಚಾಲಯಗಳನ್ನು ನಿರ್ಮಿಸಲಾಗಿರುತ್ತದೆ.<br><br>ಮೇಲ್ಕಂಡ ಛತ್ರದ ಕೊಠಡಿಗಳಿಗೆ ನಿಗದಿ ಮಾಡಿರುವ ಬಾಡಿಗೆ ಮೊತ್ತ ಹಾಗೂ ಆದೇಶದ ಪ್ರತಿಗಳನ್ನು **ಅನುಬಂಧ-02ರಲ್ಲಿ** ಒದಗಿಸಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| ಆ) | ಸರ್ಕಾರವು ಮಂತ್ರಾಲಯದಲ್ಲಿ ನಿರ್ಮಿಸಿರುವ ಛತ್ರ ಮತ್ತು ವಸತಿ ಗೃಹಗಳಲ್ಲಿ ಕುಡಿಯುವ ನೀರು ಸೇರಿದಂತೆ ಮೂಲಭೂತ ಸೌಕರ್ಯಗಳಿಲ್ಲದಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?(ವಿವರ ನೀಡುವುದು) | ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಧಾರ್ಮಿಕ ದತ್ತಿ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:29.10.2024 ರಂದು ನಡೆದ ಸಭೆಯಲ್ಲಿ ಚರ್ಚಿಸಲಾಗಿದ್ದು, ಸದರಿ ಛತ್ರದ ಕಟ್ಟಡಗಳಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಿ, ನವೀಕರಿಸುವ ಸಲುವಾಗಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳನ್ನು ಸ್ಥಳ ಪರಿಶೀಲನೆ ಮಾಡಿ ವರದಿಯನ್ನು ನೀಡುವಂತೆ ದಿನಾಂಕ:29.11.2024ರ ಪತ್ರದಲ್ಲಿ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ನಂ.1, ಕಟ್ಟಡಗಳ ವಿಭಾಗ, ಬೆಂಗಳೂರು ಇವರಿಗೆ ನಿರ್ದೇಶನ ನೀಡಲಾಗಿರುತ್ತದೆ. |
| ಇ) | ಮಂತ್ರಾಲಯದಲ್ಲಿರುವ ಛತ್ರ ಮತ್ತು ವಸತಿ ಗೃಹಗಳನ್ನು ನಿರ್ಮಿಸಿ ಎಷ್ಟು ವರ್ಷಗಳಾಗಿವೆ: ಹಾಗೂ ಇಲ್ಲಿಯವರೆಗೆ ಎಷ್ಟು ಬಾರಿ ದುರಸ್ತಿ ಮಾಡಿಸಲಾಗಿದೆ: ಇದಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು (ಸಂಪೂರ್ಣ ಮಾಹಿತಿಯೊಂದಿಗೆ ವಿವರಣೆ ನೀಡುವುದು) | ಮಂತ್ರಾಲಯ, ಕರ್ನಾಟಕ ರಾಜ್ಯ ಛತ್ರದಲ್ಲಿನ ಹಳೆಯ 33 ಕೊಠಡಿಗಳ ಕಟ್ಟಡವನ್ನು 1984-85ನೇ ಸಾಲಿನಲ್ಲಿ ನಿರ್ಮಿಸಿದ್ದು, ಸುಮಾರು 40 ವರ್ಷಗಳಾಗಿರುತ್ತದೆ. ಸದರಿ ಕಟ್ಟಡದ ಮೊದಲನೇ ಅಂತಸ್ತಿನಲ್ಲಿ 19 ಕೊಠಡಿಗಳನ್ನು 2014ನೇ ಸಾಲಿನಲ್ಲಿ ನಿರ್ಮಿಸಿದ್ದು, ಸುಮಾರು 10 ವರ್ಷಗಳಾಗಿರುತ್ತದೆ ಹಾಗೂ ಛತ್ರದ ಹಿಂಭಾಗದಲ್ಲಿ ಹೊಸದಾಗಿ 50 ಕೊಠಡಿಗಳ ಕಟ್ಟಡವನ್ನು 2020-21ನೇ ಸಾಲಿನಲ್ಲಿ ನಿರ್ಮಿಸಲಾಗಿದ್ದು, ಸುಮಾರು 03 ವರ್ಷಗಳಾಗಿರುತ್ತದೆ. ಸದರಿ ಕಟ್ಟಡದ ದುರಸ್ತಿಗೆ ಖರ್ಚು ಮಾಡಿರುವ ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಿದೆ. |
| ಈ) | ಸದರಿ ಛತ್ರದಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿ/ನೌಕರರ ಸಂಖ್ಯೆಯೆಷ್ಟು? ಇವರಿಗೆ ವೇತನಕ್ಕಾಗಿ ಪಾವತಿಸಲಾಗುತ್ತಿರುವ ಮೊತ್ತವೆಷ್ಟು: ಈ ಸಂಸ್ಥೆಗೆ ಬರುತ್ತಿರುವ ವಾರ್ಷಿಕ ಆದಾಯವೆಷ್ಟು?(ವಿವರ ನೀಡುವುದು) | • ಮಂತ್ರಾಲಯ ಕರ್ನಾಟಕ ರಾಜ್ಯ ಛತ್ರದ ವ್ಯವಸ್ಥಾಪಕರ ಹುದ್ದೆಯಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಗ್ರೂಪ್ 'ಬಿ' ವೃಂದದ ಅಧಿಕಾರಿ 01 (ಒಬ್ಬರು) ಮತ್ತು ಛತ್ರದ ನೌಕರರು 11 (ಹನ್ನೊಂದು) ಮಂದಿ ಕಾರ್ಯನಿರ್ವಹಿಸುತ್ತಿದ್ದಾರೆ.<br>• ಸದರಿ ಅಧಿಕಾರಿ/ನೌಕರರ ವೇತನಕ್ಕಾಗಿ 2023-24ನೇ ಸಾಲಿನಲ್ಲಿ ರೂ.22,55,476-00/-ಗಳು ವೆಚ್ಚವಾಗಿರುತ್ತದೆ.<br>• 2023-24ನೇ ಸಾಲಿನಲ್ಲಿ ಛತ್ರದ ಆದಾಯವು ರೂ.59,24,275/-ಗಳಾಗಿರುತ್ತದೆ. |

ಸಂಖ್ಯೆ: ಕಂಇ 185 ಮುಸಪ್ರ 2024

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು